ಗಣಿ ಮತ್ತು ... STD 21/9/21

## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | **1128** |
| ಸದಸ್ಯರ ಹೆಸರು | ಶ್ರೀ ಎಸ್.ಎಲ್.ಬೋಜೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 21.09.2021 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲ್ಲುಗಣಿ ಗುತ್ತಿಗೆ ಮಂಜೂರಾತಿ ಸಂಬಂಧ Unsaved application ಗಳ ವಿಲೇವಾರಿಯಾಗಿದೆಯೇ; (ಪೂರ್ಣ ಮಾಹಿತಿ ನೀಡುವುದು) | ದಿನಾಂಕ 12.08.2016 ರಂದು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ಕ್ಕೆ ತಿದ್ದುಪಡಿ ತರಲಾಗಿರುತ್ತದೆ. ಸದರಿ ತಿದ್ದುಪಡಿ ನಿಯಮಗಳಂತೆ ಉಪಖನಿಜ ಗಣಿ ಗುತ್ತಿಗೆಗಳನ್ನು ಹರಾಜು ಮೂಲಕವೇ ಮಂಜೂರು ಮಾಡಬೇಕಾಗಿರುತ್ತದೆ.<br>ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ಜಾರಿಯಾಗುವ ಪೂರ್ವದಲ್ಲಿ ಕಲ್ಲು ಗಣಿಗುತ್ತಿಗೆ ಕೋರಿ ಸಲ್ಲಿಸಿ, ಮಂಜೂರಾತಿಗೆ ಬಾಕಿ ಇರುವ 4500 ಕಟ್ಟಡ ಕಲ್ಲು ಅರ್ಜಿಗಳು ಮತ್ತು 1714 ಅಲಂಕಾರಿಕ ಶಿಲೆ ಗಣಿ ಗುತ್ತಿಗೆ ಕೋರಿಕೆ ಅರ್ಜಿಗಳು ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ರ ನಿಯಮ 8-B(1)ರಂತೆ ಗುತ್ತಿಗೆ ಮಂಜೂರಾತಿಗೆ ಅನರ್ಹ ಅರ್ಜಿಗಳಾಗಿರುತ್ತವೆ.<br>ಕಲ್ಲು ಗಣಿಗುತ್ತಿಗೆ ಕೋರಿಕೆ ಅರ್ಜಿಗಳು ಗುತ್ತಿಗೆ ಮಂಜೂರಾತಿಗೆ ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ರ ನಿಯಮ 8-B(1)ರಂತೆ ಅನರ್ಹಗೊಂಡಿವೆ ಎಂದು ತಿಳಿಸಿ ಮಾಹಿತಿಯನ್ನು ಅರ್ಜಿದಾರರುಗಳಿಗೆ ಹಿಂಬರಹದ ಮೂಲಕ ನೀಡಲಾಗಿರುತ್ತದೆ. |
| ಆ) | ಕಲ್ಲುಗಣಿ ಗುತ್ತಿಗೆ ಹೊಂದಿಲ್ಲದಿರುವವರು ಹಾಗೂ ಹೊರ ಜಿಲ್ಲೆಯವರು ಕ್ರಷರ್ ಪರವಾನಗಿ ಪಡೆಯುತ್ತಿದ್ದು, ಕಲ್ಲುಗಣಿ ಗುತ್ತಿಗೆ ಹೊಂದಿರುವವರಿಗೆ ಮಾತ್ರವೇ ಕ್ರಷರ್ ಪರವಾನಿಗೆ ನೀಡುವ ಕುರಿತು ಸರ್ಕಾರದ ನಿಲುವೇನು; | ಸ್ಟೋನ್ ಕ್ರಷರ್ ಉದ್ದಿಮೆಯು ಕಟ್ಟಡ ಕಲ್ಲನ್ನು ಸಂಸ್ಕರಿಸಿ ಜಲ್ಲಿ, ಎಂ-ಸ್ಯಾಂಡ್ ಇತರೆ ಅಂತಿಮ ಉತ್ಪನ್ನಗಳನ್ನು ಸಿದ್ಧಪಡಿಸುವ ಕೈಗಾರಿಕೆಯಾಗಿರುತ್ತದೆ. ಸ್ಟೋನ್ ಕ್ರಷರ್ ಘಟಕ ಸ್ಥಾಪನೆಗೆ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ, 2011 ಹಾಗೂ ನಿಯಮಗಳು, 2012 ರನ್ವಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಜಿಲ್ಲಾ ಸ್ಟೋನ್ ಕ್ರಷರ್ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರದಿಂದ ಲೈಸೆನ್ಸ್ ನೀಡಲಾಗುತ್ತಿದೆ.<br>ಕಲ್ಲು ಗಣಿಗಾರಿಕೆಗೆ ಗುತ್ತಿಗೆಗಳನ್ನು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರಂತೆ ಮಂಜೂರು ಮಾಡಲಾಗುತ್ತಿದೆ.<br>ಸ್ಟೋನ್ ಕ್ರಷರ್ ಉದ್ದಿಮೆ ಸ್ಥಾಪಿಸುವವರು, ಸದರಿ ಘಟಕ ನಡೆಸಲು ಅಗತ್ಯವಿರುವ ವಸ್ತುವಾದ ಕಚ್ಚಾ ಕಟ್ಟಡ ಕಲ್ಲಿನ ಮೂಲದ ಬಗ್ಗೆ ಲೈಸೆನ್ಸಿಂಗ್ ಪ್ರಾಧಿಕಾರಕ್ಕೆ ಮನವರಿಕೆ ಮಾಡಿಕೊಡುವ ಆಧಾರದಲ್ಲಿ, ಸಂಬಂಧಪಟ್ಟ ಜಿಲ್ಲಾ ಸ್ಟೋನ್ ಕ್ರಷರ್ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರದಿಂದ ಲೈಸೆನ್ಸ್ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. |

| | | |
|---|---|---|
| | | ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ, 2011 ಹಾಗೂ ನಿಯಮಗಳು, 2012 ರನ್ವಯ ಕಲ್ಲುಗಣಿ ಗುತ್ತಿಗೆ ಹೊಂದಿಲ್ಲದವರಿಗೆ ಮತ್ತು ಹೊರ ಜಿಲ್ಲೆಯವರಿಗೆ ಸ್ಟೋನ್ ಕ್ರಷರ್ ಘಟಕ ಸ್ಥಾಪನೆಗೆ ಅನುಮತಿ ನಿರಾಕರಿಸಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ. |
| **ಇ)** | ಕೃಷಿ ಜಮೀನಿನಲ್ಲಿರುವ ಕಟ್ಟಡ ಕಲ್ಲು ಮತ್ತು ಇತರೆ ಉಪಖನಿಜಗಳನ್ನು ತೆರವುಗೊಳಿಸಿ ಕೃಷಿ ಯೋಗ್ಯ ಜಮೀನನ್ನಾಗಿ ಪರಿವರ್ತಿಸಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆಯೇ;<br>ಕಲ್ಪಿಸಿದಲ್ಲಿ ಪೂರ್ಣ ಮಾಹಿತಿ ನೀಡುವುದು; | ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 3-A(b) ರಲ್ಲಿ ಕೃಷಿ ಜಮೀನುಗಳಲ್ಲಿ ಇರುವ ಲ್ಯಾಟರೈಟ್, ಪುಲ್ಲರ್ಸ್ ಅರ್ಥ್ ಮತ್ತು ಮುರ್ರಂ ನ್ನು ತೆರವುಗೊಳಿಸಿ ಸದರಿ ಜಮೀನನ್ನು ವ್ಯವಸಾಯ ಯೋಗ್ಯ ಜಮೀನುಗಳನ್ನಾಗಿ ಪರಿವರ್ತಿಸಿಕೊಳ್ಳಲು ಅವಕಾಶ ಇರುತ್ತದೆ. ಸದರಿ ನಿಯಮದಲ್ಲಿ ಕಟ್ಟಡಕಲ್ಲು ತೆಗೆಯಲು ಅವಕಾಶವಿರುವುದಿಲ್ಲ.<br><br>ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 35ರಂತೆ ಪಟ್ಟಾ ಜಮೀನುಗಳಲ್ಲಿ ದೊರೆಯುವ ಕಟ್ಟಡ ಕಲ್ಲು ಸೇರಿದಂತೆ ಇತರ ನಿರ್ದಿಷ್ಟವಲ್ಲದ ಉಪಖನಿಜಗಳನ್ನು ಸ್ವಂತ ಬಳಕೆಗಾಗಿ ತೆಗೆಯಲು ಅವಕಾಶವಿರುತ್ತದೆ. ಆದರೆ ಈ ನಿಯಮದಡಿ ವಾಣಿಜ್ಯ ಉದ್ದೇಶಕ್ಕಾಗಿ ನಿರಂತರವಾಗಿ ಗಣಿಗಾರಿಕೆ ನಡೆಸಲು ಅವಕಾಶವಿರುವುದಿಲ್ಲ. |
| **ಈ)** | ಹೊಸ ಮರಳು ನೀತಿ 2020 ರನ್ವಯ 1, 2 ಮತ್ತು 3ನೇ ಶ್ರೇಣಿಯ ಹಳ್ಳ ಮತ್ತು ತೊರೆಗಳಲ್ಲಿ ಲಭ್ಯವಿರುವ ಮರಳನ್ನು ಗ್ರಾಮ ಪಂಚಾಯಿತಿ ವತಿಯಿಂದ ಎತ್ತುವಳಿ ಮಾಡಿ ವಿಲೇವಾರಿ ಮಾಡಲು ಅವಕಾಶ ಕಲ್ಪಿಸಿದೆಯೇ? (ಕಲ್ಪಿಸಿದ್ದಲ್ಲಿ, ಪೂರ್ಣ ಮಾಹಿತಿ ನೀಡುವುದು) | ಹೊಸ ಮರಳು ನೀತಿ, 2020 ರನ್ವಯ I, II ಮತ್ತು IIIನೇ ಶ್ರೇಣಿಯ ಹಳ್ಳ ಮತ್ತು ತೊರೆಗಳಲ್ಲಿ ಲಭ್ಯವಿರುವ ಮರಳನ್ನು ಗ್ರಾಮ ಪಂಚಾಯಿತಿ ವತಿಯಿಂದ ವಿಲೇವಾರಿ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಮುಖ್ಯಾಂಶಗಳು ಈ ಕೆಳಕಂಡಂತಿವೆ:<br>1. ಪ್ರತಿಯೊಂದು ಜಿಲ್ಲೆಯಲ್ಲಿಯೂ ಸಹ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮರಳು ಸಮಿತಿ ಹಾಗೂ ಉಪವಿಭಾಗಾಧಿಕಾರಿಗಳು, ಕಂದಾಯ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮರಳು ಸಮಿತಿಯನ್ನು ರಚಿಸಲಾಗಿರುತ್ತದೆ.<br>2. ತಾಲ್ಲೂಕು ಮರಳು ಸಮಿತಿಯ ತಹಶೀಲ್ದಾರ್ ನೇತೃತ್ವದಲ್ಲಿ ಲೋಕೋಪಯೋಗಿ ಇಲಾಖೆ, ಜಲಸಂಪನ್ಮೂಲ ಇಲಾಖೆ, ಅರಣ್ಯ ಇಲಾಖೆ ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳ ತಂಡವು I, II ಮತ್ತು III ನೇ ಶ್ರೇಣಿಯ ಹಳ್ಳ / ತೊರೆ ಮತ್ತು ಕೆರೆಗಳಲ್ಲಿ ಮರಳು ನಿಕ್ಷೇಪವನ್ನು ಗುರುತಿಸುವುದು. ಗುರುತಿಸಿದ ಮರಳು ನಿಕ್ಷೇಪದ ಮರಳಿನ ಪ್ರಮಾಣವನ್ನು ಅಂದಾಜಿಸಿ, ಗಡಿಗಳನ್ನು ಜಿಪಿಎಸ್ ಕೋ-ಆರ್ಡಿನೇಟ್ಸ್ ಗಳೊಂದಿಗೆ ಗುರುತಿಸಿ, ನಕ್ಷೆಯೊಂದಿಗೆ ವರದಿ ತಯಾರಿಸಿ, ತಾಲ್ಲೂಕು ಮರಳು ಸಮಿತಿಯ ಸೂಕ್ತ ಶಿಫಾರಸ್ಸಿನೊಂದಿಗೆ ಜಿಲ್ಲಾ ಮರಳು ಸಮಿತಿ ಅನುಮೋದನೆಗೆ ಸಲ್ಲಿಸುವುದು. |

--3

| | | |
|---|---|---|
| | | 3. ಜಿಲ್ಲಾ ಮರಳು ಸಮಿತಿಯು ತಾಲ್ಲೂಕು ಮರಳು ಸಮಿತಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಅಗತ್ಯವಿದ್ದಲ್ಲಿ ಸೂಕ್ತ ಮಾರ್ಪಾಡುಗಳೊಂದಿಗೆ ಮರಳು ನಿಕ್ಷೇಪ ಪ್ರದೇಶಗಳನ್ನು ಆಯಾ ಗ್ರಾಮ ಪಂಚಾಯಿತಿಗಳಿಗೆ ಮರಳು ತೆಗೆಯಲು ಅಧಿಸೂಚನೆ ಹೊರಡಿಸಿ, ಕಾರ್ಯಾದೇಶ ನೀಡುವುದು. ಇದನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯ Integrated Lease Management System (ILMS) ತಂತ್ರಾಂಶದಲ್ಲಿ ನೊಂದಾಯಿಸುವುದು.<br>4. I, II ಮತ್ತು III ನೇ ಶ್ರೇಣಿಯ ಹಳ್ಳ / ತೊರೆ ಮತ್ತು ಕೆರೆಗಳಲ್ಲಿ ತೆಗೆದ ಮರಳನ್ನು ಸಂಬಂಧಿಸಿದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ತಾಲ್ಲೂಕಿನ ಸ್ಥಳೀಯ ಯಾವುದೇ ಸಾರ್ವಜನಿಕ, ಸರ್ಕಾರಿ ನಿರ್ಮಾಣ ಕಾಮಗಾರಿ ಮತ್ತು ಸಮುದಾಯತ್ವ ನಿರ್ಮಾಣ ಕಾಮಗಾರಿಗಳಿಗೆ ನೀಡುವುದು.<br>5. ಗ್ರಾಮ ಪಂಚಾಯಿತಿಗಳಿಗೆ ಮರಳು ರವಾನೆ ಪರವಾನಿಗೆ ನೀಡುವ ಮೊದಲು ಗ್ರಾಹಕರುಗಳಿಂದ ಮನೆ ಅಥವಾ ಇತರ ಕಾಮಗಾರಿ ಕೈಗೊಳ್ಳುವ ಕುರಿತು ನಕ್ಷೆ ಅಥವಾ ಕಾಮಗಾರಿ ನಡೆಯುತ್ತಿರುವ ಛಾಯಾಚಿತ್ರ ಅಥವಾ ಕಾಮಗಾರಿ ಕೈಗೊಳ್ಳುತ್ತಿರುವ ಬಗ್ಗೆ ಇನ್ನಿತರೆ ಯಾವುದಾದರೊಂದು ದಾಖಲೆಗಳನ್ನು ಪಡೆದು, ಮರಳು ಸಾಗಾಣಿಕೆ ಪರವಾನಿಗೆ ನೀಡುವುದು.<br>6. ಗ್ರಾಮ ಪಂಚಾಯಿತಿಯು ಗ್ರಾಹಕರುಗಳಿಂದ ಪ್ರತಿ ಮೆಟ್ರಿಕ್ ಟನ್ ಗೆ ರೂ. 300/- ಪಡೆದು ಗಣಿ ಮತ್ತು ಭೂವಿಜ್ಞಾನ ಇಲಾಖೆ ನೀಡಲಾಗುವ ವಿಶೇಷ ರಕ್ಷಣಾತ್ಮಕ ಪರವಾನಿಗೆ ಹಾಳೆಗಳಲ್ಲಿ (SSPP) ಮರಳು ಸಾಗಾಣಿಕೆ ಪರವಾನಿಗೆಗಳನ್ನು ಮುದ್ರಿಸಿ, ಗ್ರಾಹಕರಿಗೆ ನೀಡುವುದು.<br>7. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಎತ್ತಿನಗಾಡಿ, ಟ್ರ್ಯಾಕ್ಟರ್ ಹಾಗೂ 3 ಟನ್ ಸಾಮರ್ಥ್ಯದ ಇತರ ಲಘು ವಾಹನಗಳಲ್ಲಿ ಮಾತ್ರ ಮರಳು ಸಾಗಾಣಿಕೆ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. |
| **ಉ)** | ಮರಳು ನಿಕ್ಷೇಪಗಳು ಸರ್ಕಾರಿ ಜಮೀನುಗಳಲ್ಲಿದ್ದು, ಸಂಪರ್ಕಿಸುವ ರಸ್ತೆ, ಹಳ್ಳ ಮತ್ತು ತೊರೆಗಳು ಅರಣ್ಯ ಪ್ರದೇಶವಾಗಿದ್ದು, ಅರಣ್ಯ ಇಲಾಖೆಯವರು ಮರಳು ಎತ್ತುವಳಿ ಮಾಡಲು ಅನುಮತಿ ನಿರಾಕರಿಸುತ್ತಿದ್ದು, ಈ ಕುರಿತು ಸರ್ಕಾರದ ನಿಲುವೇನು; | ಹೊಸ ಮರಳು ನೀತಿ, 2020 ರನ್ವಯ I, II ಮತ್ತು IIIನೇ ಶ್ರೇಣಿಯ ಹಳ್ಳ ಮತ್ತು ತೊರೆಗಳಲ್ಲಿ ಲಭ್ಯವಿರುವ ಮರಳನ್ನು ಗ್ರಾಮ ಪಂಚಾಯಿತಿ ವತಿಯಿಂದ ವಿಲೇವಾರಿ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.<br>ಸದರಿ ಮರಳು ನಿಕ್ಷೇಪದ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು ಅರಣ್ಯ ಪ್ರದೇಶದಲ್ಲಿ ಹಾದುಹೋಗುತ್ತಿದ್ದಲ್ಲಿ ಅರಣ್ಯ ಇಲಾಖೆಯಿಂದ ವಾಹನಗಳ ಸಾಗಾಣಿಕೆಗೆ ಅರಣ್ಯ ತೀರುವಳಿ ಪತ್ರ ಪಡೆಯಲು ಆಕ್ಷೇಪಣೆಗಳು ವ್ಯಕ್ತವಾಗಿರುವುದು ಕಂಡುಬಂದಿರುತ್ತದೆ. |

| | | |
|---|---|---|
| | | I, II ಮತ್ತು IIIನೇ ಶ್ರೇಣಿಯ ಹಳ್ಳ ಮತ್ತು ತೊರೆಗಳಲ್ಲಿ ಲಭ್ಯವಿರುವ ಮರಳನ್ನು ಸ್ಥಳೀಯ ಮತ್ತು ಸಮುದಾಯ ಕಾಮಗಾರಿಗಳಿಗೆ ಎತ್ತಿನಗಾಡಿ, ಟ್ರ್ಯಾಕ್ಟರ್ ಹಾಗೂ ಇತರೆ ಲಘು ವಾಹನಗಳಲ್ಲಿ ಮಾತ್ರ ಮರಳನ್ನು ತುಂಬಿಕೊಂಡು ಹೋಗಲು ಅವಕಾಶ ಕಲ್ಪಿಸಿರುವ ಹಿನ್ನಲೆಯಲ್ಲಿ ಸಂಬಂಧಪಟ್ಟ ಇಲಾಖೆಯೊಂದಿಗೆ ಸಮಾಲೋಚಿಸಿ ಇರುವ ಅಡೆತಡೆ ನಿವಾರಣೆಗೆ ಕ್ರಮವಹಿಸಲಾಗುತ್ತಿದೆ. |
| **ಊ)** | ಕ್ರಷರ್ ಘಟಕ ಸ್ಥಾಪನೆಗೆ ಅರ್ಜಿ ಸಲ್ಲಿಸಿದ್ದಲ್ಲಿ, ಜಿಲ್ಲಾ ಕಲ್ಲುಪುಡಿ ಘಟಕಗಳ ನಿಯಂತ್ರಣ ಪ್ರಾಧಿಕಾರದಿಂದ ನಿಯಮಗಳನ್ನು ಪಾಲನೆ ಮಾಡಲಾಗುತ್ತಿದೆಯೇ; ಪಾಲನೆ ಮಾಡದೆ ಇರುವವರ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ? | ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ, 2011 ಹಾಗೂ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ನಿಯಮಗಳು, 2012ರಂತೆ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರಕ್ಕೆ ಕ್ರಷರ್ ಘಟಕಗಳನ್ನು ಸ್ಥಾಪಿಸಲು ಪರವಾನಿಗೆ ನೀಡುವ ಅಧಿಕಾರ ಪ್ರತ್ಯೋಜಿಸಲಾಗಿದೆ.<br><br>ಆಯಾ ಜಿಲ್ಲಾ ಲೈಸೆನ್ಸಿಂಗ್ ಪ್ರಾಧಿಕಾರವು ಯಾವುದೇ ಕಲ್ಲು ಪುಡಿ ಘಟಕ ಸ್ಥಾಪಿಸುವ ಸಂಬಂಧ ಸಲ್ಲಿಕೆಯಾಗುವ ಅರ್ಜಿಯನ್ನು ನಿಯಮಾನುಸಾರ ಪರಿಶೀಲಿಸಿ ಸೂಕ್ತ ತೀರ್ಮಾನ ಕೈಗೊಳ್ಳುತ್ತದೆ. ಸದರಿ ಪ್ರಾಧಿಕಾರದ ಯಾವುದೇ ತೀರ್ಮಾನಗಳನ್ನು ಸಂಬಂಧಪಟ್ಟ ಪ್ರಾದೇಶಿಕ ಆಯುಕ್ತರ ನೇತೃತ್ವದಲ್ಲಿ ರಚಿಸಲಾಗಿರುವ ಮೇಲ್ಮನವಿ ಪ್ರಾಧಿಕಾರದ ಮುಂದೆ ಪ್ರಶ್ನಿಸಲು ಅಧಿನಿಯಮದ ಕಲಂ 15ರಲ್ಲಿ ಅವಕಾಶ ಕಲ್ಪಿಸಲಾಗಿದೆ.<br><br>ಆದಾಗ್ಯೂ, ಕಳೆದ ಮೂರು ವರ್ಷಗಳಲ್ಲಿ ಲೈಸೆನ್ಸ್ ಪಡೆಯದೇ ಕಲ್ಲುಪುಡಿ ಘಟಕ ನಡೆಸುತ್ತಿದ್ದ 340 ಪ್ರಕರಣಗಳನ್ನು ಪತ್ತೆ ಮಾಡಿ, ಕಾಯ್ದೆ ಹಾಗೂ ನಿಯಮಗಳ ಅನುಸಾರ 47 ಪ್ರಕರಣಗಳಲ್ಲಿ ಮೊಕದ್ದಮೆ ದಾಖಲಿಸಿ 293 ಪ್ರಕರಣಗಳಲ್ಲಿ ರೂ. 155.22 ಲಕ್ಷಗಳ ದಂಡ ವಸೂಲು ಮಾಡಲಾಗಿದೆ. |

ಸಂಖ್ಯೆ ಸಿಐ 479 ಎಂಎಂಎನ್ 2021

Halappa B A

**(ಆಚಾರ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು
ವಿಕಲಚೇತನರ, ಹಿರಿಯ ನಾಗರಿಕರ
ಸಬಲೀಕರಣ ಸಚಿವರು.